**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು -1**

ಸಂಖ್ಯೆ: ಸಿ1(1) ನೌ.ಸೇ.ಆನ್ ಲೈನ್/01/2018-19 ದಿನಾಂಕ:29-04-2019

**-:ಅಧಿಕೃತ ಜ್ಞಾಪನ:-**

ವಿಷಯ:-ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-ಎ ಮತ್ತು ಬಿ ಅಧಿಕಾರಿಗಳು ಹಾಗೂ ಎಲ್ಲಾ ವೃಂದದ ಭೋಧಕ/ಭೋಧಕೇತರ ನೌಕರರ ಸೇವಾ ಸೌಲಭ್ಯಗಳನ್ನು ಆನ್‌ಲೈನ್ ತಂತ್ರಾಂಶದ ಮೂಲಕ ಸೃಜಿಸಿ ಒದಗಿಸುವ ಕುರಿತು.

ಉಲ್ಲೇಖ:-1. ಈ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ: ಸಂಖ್ಯೆ: ಸಿ1(1) ನೌ.ಸೇ.ಆನ್ ಲೈನ್/01/ 2018-19.ದಿನಾಂಕ:08.04.2019

2. ದಿನಾಂಕ:25.04.2019 ರಂದು ನಡೆದ ಸಭೆಯ (ವಿಡಿಯೋ ಕಾನ್ಪರೆನ್ಸ್) ನಿರ್ಣಯ

********

ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕೃತ ಜ್ಞಾಪನ ದಿನಾಂಕ:08.04.2019 ರಲ್ಲಿದ್ದಂತೆ ಕರ್ನಾಟಕ ಸಿವಿಲ್ ಸೇವಾ ನಿಯಮಗಳಡಿಯಲ್ಲಿ ಕೆಳಕಂಡ ವಿವಿಧ ಸೇವಾ ಸೌಲಭ್ಯಗಳನ್ನು ಇಲಾಖೆಯ ಎಲ್ಲಾ ವೃಂದದ ಅಧಿಕಾರಿಗಳು ಮತ್ತು ಭೋಧಕ / ಭೋಧಕೇತರ ನೌಕರರಿಗೆ ಒದಗಿಸಬೇಕಿರುತ್ತದೆ.

ಈ ಸೇವೆಗಳನ್ನು ಆನ್‌ಲೈನ್ ತಂತ್ರಾಂಶದ ಮುಖಾಂತರ ಒದಗಿಸಲು ಇಲಾಖೆ ನಿರ್ಣಯಿಸಿದ್ದು, ಈ ಎಲ್ಲಾ ಸೌಲಭ್ಯಗಳನ್ನು ದಿನಾಂಕ:01/05/2019 ರಿಂದ ಜಾರಿಗೆ ಬರುವಂತೆ ಆನ್‌ಲೈನ್ ಮುಖಾಂತರ ನಿರ್ವಹಿಸಿ ಇತ್ಯರ್ಥಪಡಿಸುವುದು ಕಡ್ಡಾಯವಾಗಿರುತ್ತದೆ, ಸೇವೆಗಳ ಆನ್‌ಲೈನ್ ತಂತ್ರಾಂಶದ ಬಳಕೆ ಹೊಸ ವಿಧಾನವಾಗಿರುವುದರಿಂದ ಅನುಷ್ಠಾನ ಅಧಿಕಾರಿಗಳಿಗೆ/ ಸಿಬ್ಬಂದಿಗಳಿಗೆ ಪ್ರಾರಂಭಿಕ ಪರಿಚಯ ಮಾಡಿಕೊಡುವ ಉದ್ದೇಶದಿಂದ ದಿನಾಂಕ:25.04.2019 ರಂದು ನಡೆದ ವಿಡಿಯೋ ಸಂವಾಧದಲ್ಲಿ ಮಾನ್ಯ ಆಯುಕ್ತರು ಸೂಚಿಸಿರುವಂತೆ ತಾಲ್ಲೂಕು ಮತ್ತು ಜಿಲ್ಲಾ ಹಂತಗಳಲ್ಲಿ ಸದರಿ ಕಾರ್ಯವನ್ನು ಯಶಸ್ವಿಗೊಳಿಸಲು ಕ್ರಮವಹಿಸಬೇಕಾಗಿರುವುದಿಂದ ಆಯುಕ್ತಾಲಯ/ವಿಭಾಗ ಮಟ್ಟದಿಂದ ತಲಾ 12 ಜನ ಸಂಪನ್ಮೂಲ ವ್ಯಕ್ತಿಗಳಿಗೆ ಕೆಳಕಂಡ ದಿನಾಂಕಗಳಂದು ಪ್ರಾಯೋಗಿಕವಾಗಿ ಅನುಷ್ಠಾನದ ಬಗ್ಗೆ ಎರಡು ದಿನದ ತರಬೇತಿ ನೀಡಲು ತೀರ್ಮಾನಿಸಲಾಗಿದೆ.

ಅದರಂತೆ ಬೆಂಗಳೂರು,ಧಾರವಾಡ, ಕಲಬುರ್ಗಿ ಆಯುಕ್ತಾಲಯ ಮಟ್ಟದಿಂದ ಗಣಕಯಂತ್ರ ಬಳಕೆಯಲ್ಲಿ [ಹೆಚ್ಚಿನ ನೈಪುಣ್ಯತೆ ಹೊಂದಿರುವ] 6 ಜನ ವಿವಿಧ ವೃಂದದ ಲಿಪಿಕ ನೌಕರರು ಮತ್ತು 6 ಜನ ಗ್ರೂಪ್ "ಎ" ಮತ್ತು ಗ್ರೂಪ್"ಬಿ"ವೃಂದದ ಅಧಿಕಾರಿಗಳು (ಬಿ,ಇ,ಓ, ಉಪನಿರ್ದೇಶಕರು(ಆಡಳಿತ), ಡಯಟ್ ಸಂಸ್ಥೆಗಳಲ್ಲಿನ ಅಧಿಕಾರಿಗಳು) ನ್ನು ಒಟ್ಟು 12 ಜನ ಸಂಪನ್ಮೂಲ ತಂಡವನ್ನು ಆಯ್ಕೆ ಮಾಡಿ ಕಡ್ಡಾಯವಾಗಿ ತರಬೇತಿ ಕಾರ್ಯಕ್ಕೆ ಸಂಬಂಧಿಸಿದ ಅಪರ ಆಯುಕ್ತರು ನಿಯೋಜಿಸಲು ಕೋರಿದೆ.

**ತರಬೇತಿ ವೇಳಾಪಟ್ಟಿ ವಿವರ**

| ಕ್ರಮ ಸಂಖ್ಯೆ | ಆಯುಕ್ತಾಲಯ/ವಿಭಾಗ | ತರಬೇತಿ ದಿನಾಂಕ ಮತ್ತು ಸಮಯ | ತರಬೇತಿ ನಡೆಯುವ ಸ್ಥಳ |
|---|---|---|---|
| 1. | ಕಲಬುರ್ಗಿ ಮತ್ತು ಧಾರವಾಡ | 03.05.2019 ರಿಂದ 4.05.2019 ಸಮಯ:ಬೆಳಗ್ಗೆ 10.00 | ಎಸ್.ಎಸ್.ಎ, ಕಛೇರಿ 4ನೇ ಮಹಡಿ, ನೃಪತುಂಗ ರಸ್ತೆ ಬೆಂಗಳೂರು |
| 2. | ಮೈಸೂರು ಮತ್ತು ಬೆಂಗಳೂರು | 08.05.2019 ರಿಂದ 09.05.2019 ಸಮಯ:ಬೆಳಗ್ಗೆ10.00 | ಎಸ್.ಎಸ್.ಎ, ಕಛೇರಿ 4ನೇ ಮಹಡಿ, ನೃಪತುಂಗ ರಸ್ತೆ ಬೆಂಗಳೂರು |

[ಮೈಸೂರು ವಿಭಾಗದಿಂದ ಸಹನಿರ್ದೇಶಕರು ಮೈಸೂರು ವಿಭಾಗ ಇವರ 12 ಜನ ಸಂಪನ್ಮೂಲ ತಂಡವನ್ನು ಆಯ್ಕೆ ಮಾಡಿ ತರಬೇತಿಗೆ ನಿಯೋಜಿಸಲು ಜವಬ್ದಾರಿ ವಹಿಸಿದೆ].

(ಪುಟ......2)

ರಾಜ್ಯ ಮಟ್ಟದಲ್ಲಿ ತರಬೇತಿ ಪಡೆದ ಸಂಪನ್ಮೂಲ ತಂಡ ಆಯಾ ಆಯುಕ್ತಾಲಯ/ ವಿಭಾಗದ ಎಲ್ಲಾ ಅನುಷ್ಠಾನ ಅಧಿಕಾರಿಗಳು/ಸಿಬ್ಬಂದಿಯವರಿಗೆ ಪ್ರಾಯೋಗಿಕ ಅನುಷ್ಠಾನದ ಬಗ್ಗೆ ತರಬೇತಿ ನೀಡಬೇಕಾಗುತ್ತದೆ. ಆಯಾ ಆಯುಕ್ತಾಲಯದಿಂದ ತರಬೇತಿ ವಿನ್ಯಾಸ ತಯಾರಿಸಿಕೊಂಡು ಆನ್‌ಲೈನ್ ವ್ಯವಸ್ಥೆಯ ಅನುಷ್ಠಾನದ ಮಾರ್ಗದರ್ಶನದ ವ್ಯವಸ್ಥೆಯನ್ನು ತಮ್ಮ ಹಂತದಲ್ಲಿ ಮಾಡಬೇಕಾಗುತ್ತದೆ.

(ಡಾ॥ ಎಂ.ಟಿ ರೇಜು)
**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

ಇವರಿಗೆ:

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-ಇವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು. ಇವರ ಮಾಹಿತಿಗಾಗಿ
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲ್ಬುರ್ಗಿ ಅಗತ್ಯ ಕ್ರಮಕ್ಕಾಗಿ
4. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ನಿರ್ದೇಶಕರುಗಳಿಗೆ ಮಾಹಿತಿಗಾಗಿ
5. ಸಾರ್ವಜನಿಕ ಶಿಕ್ಷಣ ಇಲಾಖೆಯ ವಿಭಾಗೀಯ ಸಹ ನಿರ್ದೇಶಕರು ಮೈಸೂರು ಇವರಿಗೆ.
6. ಅನ್‌ಲೈನ್ ತಂತ್ರಾಂಶ ಸಂಪನ್ಮೂಲ ಅಧಿಕಾರಿಗಳು ಆಯುಕ್ತರ ಕಛೇರಿ ಹಾಗೂ ಸಮಗ್ರ ಶಿಕ್ಷಣ ಅಭಿಯಾನ ಕಛೇರಿ ಬೆಂಗಳೂರು ರವರಿಗೆ ಮುಂದಿನ ಕ್ರಮಕ್ಕಾಗಿ.
7. ಎಲ್ಲಾ ನೋಡಲ್ ಅಧಿಕಾರಿಗಳು ಅನ್‌ಲೈನ್ ಅನುಷ್ಠಾನ ಉಸ್ತುವಾರಿ ಇವರು ತರಬೇತಿಗೆ ಹಾಜರಾಗಲು ತಿಳಿಸಿದೆ.
8. ಕಛೇರಿ ಪ್ರತಿ.